**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮಂಡ್ಯ.**

# ಸಿ.ಸಿ.ಸಂಖ್ಯೆ:1519/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಕಮಲಾಕ್ಷಿ | ಪ್ರಮಾಣ ವಚನ ಬೋಧಿಸಿದ ದಿನಾಂಕ | 27-02-2026 |
| ಗಂಡನ ಹೆಸರು | ಮಹದೇವಯ್ಯ | | |
| ವಯಸ್ಸು | 53 ವರ್ಷ | | |
| ವೃತ್ತಿ | ಪಿ.ಎಸ್.ಐ. ಸಂಚಾರಿ ಪೋಲಿಸರು , ಮದ್ದೂರು | ಚಾಸಾ | 16 |
| ವಾಸಸ್ಥಳ | ಮದ್ದೂರು | ಫ್ರಾಸಾ | 3 |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :-**

ದಿಃ 22-07-2022 ರಿಂದ 02-08-2023 ರವರೆಗೆ ಮಂಡ್ಯ ಸಂಚಾರಿ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 12-06-2023 ರಲಿ ಸದರಿ ಕಡತವನ್ನು ರಘು ಪ್ರಕಾಶ್ ರವರಿಂದ ಪಡೆದು ತನಿಖೆ ಮುಂದುವರೆಸಿರುತ್ತೇನೆ. ಈಗಾಗಲೇ ಈ ಪ್ರಕರಣದ ಭಾಗಶಃ ತನಿಖೆ ಆಗಿದ್ದು, ದಿಃ 07-07-2023 ರಂದು ಈ ಪ್ರಕರಣದ 2 ನೇ ಆರೋಪಿಯ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು, ಆರೋಪಿತರ ವಿರುದ್ಧ ಆರೋಪವು ದೃಢ ಪಟ್ಟ ಹಿನ್ನಲೆಯಲ್ಲಿ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-5 (ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು :- ಆರೋಪಿ ಪರ ವಕೀಲರಿಂದ :-**

ನಿಪಿ-5 ರ ಗಾಯದ ಪ್ರಮಾಣ ಪತ್ರವನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿಸಿ ಕೊಂಡಿದ್ದೇನೆಂದರೆ ಸರಿಯಲ್ಲ. 1 ನೇ ಆರೋಪಿಯ ವಿರುದ್ಧ ಆರೋಪವು ದೃಡಪಡದೇ ಇದ್ದರೂ ಸಹ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಮಂಡ್ಯ.